ಓ.ಎಸ್. ನಂಃ 80/2019 ಪಿ.ಡಬ್ಲ್ಯೂ (2)

**ದಿನಾಂಕಃ 18-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿ ನಂ. 1 ರಿಂದ 6 ರವರ ಪರ ಶ್ರೀ ಎಮ್ ಹೆಚ್ ಎ ವಕೀಲರಿಂದಃ</u>**

ನಾನು ಎಸ್ ಎಸ್ ಎಲ್ ಸಿ ಓದಿದ್ದೇನೆ. ಮುಖ್ಯ ವಿಚಾರಣೆಯ ಪತ್ರದಲ್ಲಿ ಬರೆದಿದ್ದು ನನಗೆ ಓದು ಮತ್ತು ಬರಹ ಬರುವುದಿಲ್ಲ.

2. ದಿಃ- 24-12-2012 ರಂದು ನೊಂದಾಯಿತ ಖರೀದಿ ಕರಾರು ಪತ್ರವನ್ನು ಸಬ್ ರಿಜಿಸ್ಟರ್ ಕಚೇರಿ ಕೊಪ್ಪಳದಲ್ಲಿ ಮಾಡಲಾಗಿದೆ. ಆಗ ನಾನು ಹಾಜರಿದ್ದು ಸಹಿ ಮಾಡಿದ್ದೇನೆ. ಅದರಲ್ಲಿ ಬರೆದ ವಿಷಯ ಗೊತ್ತಿಲ್ಲ ಎಂದರೆ ಸರಿ. ಸರ್ವೇ ನಂ. 60 ಅದು ಕಲಕೇರಿ ಹದ್ದಿಯ 19 ಎಕರೆ ಚಿಲ್ಲರೆ ಗುಂಟೆ ಪೈಕಿ 2 ಎಕರೆ 34 ಗುಂಟೆ ಜಮೀನು ಸಂಬಂಧದಲ್ಲಿ ಖರೀದಿ ಕರಾರು ಪತ್ರ ಇದೆ.

3. ವಿವಾದಿತ ಖರೀದಿ ಕರಾರು ಪತ್ರವನ್ನು ಯಾರು ಬರೆದರು ಅಂತಾ ನೆನಪಿಲ್ಲ. ಮೃತ ದೇವಪ್ಪನಿಗೆ ಸರಿಯಾಗಿ ಕಣ್ಣು ಕಾಣುತ್ತಿರಲಿಲ್ಲಾ ಎಂದರೆ ಸರಿಯಲ್ಲ. ಕಣ್ಣು ಕಾಣುತ್ತಿತ್ತು. ದಿಃ- 22-02-2010 ರಂದು ಮೃತ ದೇವಪ್ಪ ಇದೇ ವಾದಿಗೆ ಬರೆದುಕೊಟ್ಟಿದ್ದ ಎಂದರೆ ಗೊತ್ತಿಲ್ಲ. ಆ ಕರಾರು ಪತ್ರದ ರದ್ದತಿಗೆ ಬಂದಿದ್ದರು ಎಂದರೆ ಗೊತ್ತಿಲ್ಲ. ಆ ರದ್ದತಿ ವಿಷಯ ನನಗೆ ಹೇಳಿದ್ದರೂ ಎಂದರೆ ಸರಿಯಲ್ಲ. ಆದರೂ ಆ ಕುರಿತು ನಾನು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ. ನಾನು ದೇವಪ್ಪನಿಂದ ಹೊಲ ತೆಗೆದುಕೊಂಡಿದ್ದೇನೆ ಸಾಕ್ಷಿಯಾಗಿ ಸಹಿ ಮಾಡಬೇಕು ಬರಬೇಕು ಎಂದು ನಾಗಪ್ಪ ಕರೆದಿದ್ದ, ಅದಕ್ಕೆ ಹೋಗಿ ಸಹಿ ಮಾಡಿದೆ ಎನ್ನುತ್ತಾರೆ.

4. ಆ ವ್ಯವಹಾರ 6 ಲಕ್ಷಕ್ಕೆ ಮುಗಿದಿತ್ತು. ನಾಗಪ್ಪ 5,10,000/- ರೂಪಾಯಿ ಸಬ್ ರಿಜಿಸ್ಟರ್ ಕಚೇರಿಯಲ್ಲಿ ನನ್ನ ಸಮಕ್ಷಮ ದೇವಪ್ಪನಿಗೆ ನಗದಾಗಿ ಕೊಟ್ಟ. ಆ ನೋಟಿನ ಮುಖ ಬೆಲೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ಆಗ ಮಂಜುನಾಥ ಎಂಬ ವ್ಯಕ್ತಿ ನನ್ನೊಂದಿಗೆ ಸಾಕ್ಷಿದಾರನಾಗಿ ಸಹಿ ಮಾಡಿದ.

5. 2014 ರಿಂದ ನಾಗಪ್ಪ ನನಗೆ ಪರಿಚಯಸ್ಥ, ನಾಗಪ್ಪನಿಗೆ ಅಡಚಣೆ ಬಂದಾಗ ಸಹಾಯ ಮಾಡುತ್ತೇವೆ ಎಂದರೆ ಸರಿ. ವಾದಿಯೊಂದಿಗೆ ಸೇರಿಕೊಂಡು ನಿಪಿ 1 ಖರೀದಿ ಕರಾರು ಪತ್ರವನ್ನು ನಕಲಿಯಾಗಿ ಸೃಷ್ಟಿ ಮಾಡಲಾಯಿತು ಎಂದರೆ ಸರಿಯಲ್ಲ. ಎಲ್ಲಾ ವಿಷಯ ಗೊತ್ತಿದ್ದರೂ ಸಹ ನಾಗಪ್ಪನಿಗೆ ಅನೂಕೂಲ ಮಾಡಲು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಪ್ರತಿವಾದಿ ನಂ. 7 ರವರ ಪರ ಶ್ರೀ ಬಿಸಿಜಿ ವಕೀಲರು ಹಾಜರಿದ್ದು ಪ್ರತಿವಾದಿ ನಂ 1 ರಿಂದ 6 ರವರ ಪರ ವಕೀಲರ ಪಾಟೀ ಸವಾಲನ್ನು ಅನುಮೊದಿಸಲಾಗಿ ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**